ಈ) ಬಾಕಿ ಬಿಡುಗಡೆ ಮಾಡಬೇಕಾಗಿರುವ ಹಣ ಎಷ್ಟು ಹಾಗೂ ಯಾವಾಗ ಬಿಡುಗಡೆ ಮಾಡಲಾಗುವುದು;

ಉ) ಸದರಿ ಯೋಜನೆಯ ಕಾಮಗಾರಿಯು ತ್ವರಿತವಾಗಿ ಪೂರ್ಣಗೊಳ್ಳಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿದೆಯೇ;

ಊ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದು?

ಶ್ರೀ ಪಿ.ಜಿ. ಆರ್ ಸಿಂಧ್ಯಾ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಬಿಜಾಪುರ–ಬಸವನಬಾಗೇವಾಡಿ ಸೆಕ್ಷನ್‌ನಲ್ಲಿನ ಕೆಲಸವು ಬಹುಪಾಲು ಪೂರ್ಣಗೊಂಡಿದೆ. ಬಸವನಬಾಗೇವಾಡಿ–ಬಾಗಲಕೋಟೆ–ಗದಗ್ ಸೆಕ್ಷನ್‌ನಲ್ಲಿ ಕೆಲಸ ಪ್ರಗತಿಯಲ್ಲಿದೆ.

ಆ) ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.89.36 ಕೋಟಿಗಳು.

ಇ) 31–03–2005ನೇ ಅಂತ್ಯಕ್ಕೆ ಈ ಯೋಜನೆಗೆ ರಾಜ್ಯ ಸರ್ಕಾರವು ರೂ.46 ಕೋಟಿಯನ್ನು ಬಿಡುಗಡೆ ಮಾಡಿದೆ.

ಈ) ರಾಜ್ಯ ಸರ್ಕಾರದಿಂದ ಈ ಯೋಜನೆಗೆ ಕಾಮಗಾರಿಯ ಪ್ರಗತಿಯನ್ನು ಗಣನೆಗೆ ತೆಗೆದುಕೊಂಡು ರಾಜ್ಯದ ಸಂಪನ್ಮೂಲವನ್ನು ಆಧರಿಸಿ ರಾಜ್ಯ ಸರ್ಕಾರದ ಪಾಲಿನ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ದಿನಾಂಕ : 28–04–2005 ರಂದು ಮಾನ್ಯ ಮುಖ್ಯಮಂತ್ರಿಯವರು ದೆಹಲಿಯಲ್ಲಿ ಮಾನ್ಯ ಕೇಂದ್ರ ರೈಲ್ವೆ ಸಚಿವರನ್ನು ಭೇಟಿ ಮಾಡಿ, ರಾಜ್ಯದಲ್ಲಿನ ಎಲ್ಲಾ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಕೋರಿ ಒಂದು ಮೆಮೊರಾಂಡಮ್‌ನ್ನು ಸಲ್ಲಿಸಿರುತ್ತಾರೆ. ಅಲ್ಲದೆ ದಿನಾಂಕ : 29–04–2005 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ರೈಲ್ವೆ ಮಂಡಳಿಯ ಅಧ್ಯಕ್ಷರೊಡನೆ ಈ ಬಗ್ಗೆ ಸುಧೀರ್ಘ ಚರ್ಚೆ ನಡೆಸಿ ರೈಲ್ವೆ ಯೋಜನೆಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಮನವಿ ಮಾಡಿರುತ್ತಾರೆ.

ಊ) ಕಾಲಮಿತಿ ನಿಗದಿಯಾಗಿಲ್ಲ.

4639 (5011) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ):–
ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರವಾಸಿಗರ ಸ್ಥಳವಾಗಿರುವ ಬಿಜಾಪುರಕ್ಕೆ ಪ್ರವಾಸಿಗರನ್ನು ಆಕರ್ಷಿಸಲು ಹಾಗೂ ಇಲ್ಲಿನ ಪ್ರಖ್ಯಾತ ಹೂ ಹಾಗೂ ಹಣ್ಣುಗಳನ್ನು ದೇಶ–ವಿದೇಶಗಳಿಗೆ ರಫ್ತು ಮಾಡಲು

ಅನುಕೂಲವಾಗುವಂತೆ ಬಿಜಾಪುರದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಸರ್ಕಾರ ಯೋಚಿಸಿದೆಯೇ;

ಆ) ಹಾಗಿದ್ದಲ್ಲಿ, ವಿಮಾನ ನಿಲ್ದಾಣಕ್ಕೆ ಗುರುತಿಸಿರುವ ಸ್ಥಳ ಯಾವುದು; ಈಗಾಗಲೇ ಖರೀದಿಸಲಾಗಿದೆಯೇ;

ಇ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ ಯಾವ ರೀತಿಯಲ್ಲಿ ಪತ್ರ ವ್ಯವಹಾರವನ್ನು ನಡೆಸಿದೆ;

ಈ) ಇದುವರೆಗೂ ವಿಮಾನ ನಿಲ್ದಾಣ ಸ್ಥಾಪನೆಗೆ ಯಾವ ಯಾವ ಸಮೀಕ್ಷೆಗಳನ್ನು ಕೈಗೊಳ್ಳಲಾಗಿದೆ;

ಉ) ವಿಮಾನ ನಿಲ್ದಾಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಊ) ಯಾವ ಕಾಲಮಿತಿಯೊಳಗಾಗಿ ವಿಮಾನ ನಿಲ್ದಾಣದ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು;

ಋ) ಬಿಜಾಪುರದಲ್ಲಿ ವಿಮಾನ ನಿಲ್ದಾಣದ ಸ್ಥಾಪನೆಗೆ ಇದುವರೆಗೂ ಖರ್ಚು ಮಾಡಿರುವ ಹಣ ಎಷ್ಟು ಹಾಗೂ ನಿಗದಿಪಡಿಸಿರುವ ಹಣ ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಯೋಚಿಸಿದೆ.

ಆ) ಈ ಕೆಳಕಂಡ ಸ್ಥಳಗಳನ್ನು ಗುರ್ತಿಸಲಾಗಿದೆ;

1) ಬಿಜಾಪುರ ತಾಲ್ಲೂಕಿನ ಅರಕೇರಿ ಗ್ರಾಮದ ಸರ್ಕಾರಿ ಜಮೀನು – 450 ಎಕರೆ.
2) ಆಲಿಯಬಾದ್ ಕೈಗಾರಿಕೆ ವಸಾಹತು ಪ್ರದೇಶದ 202 ಎಕರೆ.
3) ಬುರಾನಪುರ ಗ್ರಾಮದ ಸರ್ಕಾರಿ ಜಮೀನು ಒಟ್ಟು 457–01 ಎಕರೆ ಹಾಗೂ 82–32 ಎಕರೆ ಖಾಸಗಿ ಜಮೀನನ್ನು ಗುರ್ತಿಸಲಾಗಿದೆ.

ಈ ವರೆಗೆ ಯಾವ ಜಮೀನನ್ನು ಅಂತಿಮವಾಗಿ ಆಯ್ಕೆಮಾಡಿರುವುದಿಲ್ಲ.

ಇ) ಗುರುತಿಸಲಾದ ಜಮೀನಿನ ನಿವೇಶನವನ್ನು 1,50,000 ಅಳತೆಗೆ ಸರಿ ಹೊಂದುವಂತೆ ಟೊಪೋಗ್ರಾಫಿಕಲ್ ನಕಾಶೆಯನ್ನು ತಯಾರಿಸಿ ಅದನ್ನು ಭಾರತೀಯ ವೈಮಾನಿಕ ಪ್ರಾಧಿಕಾರದ ಅನುಮೋದನೆಗೆ ಕಳುಹಿಸಿದ ಪತ್ರ ವ್ಯವಹಾರ ದಿನಾಂಕ 29–10–2001.

ಹಿಂದಿನ ಮೂಲಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ರಾಜ್ಯ ಸಚಿವರು ಕೇಂದ್ರ ಸರ್ಕಾರದ ನಾಗರೀಕ ವಿಮಾನಯಾನ ರಾಜ್ಯ ಸಚಿವರಿಗೆ ದಿನಾಂಕ

5–04–2003 ರಂದು ಬರೆದ ಪತ್ರದಲ್ಲಿ ಉದ್ದೇಶಿತ ವಿಮಾನ ನಿಲ್ದಾಣದ ನಿವೇಶನವನ್ನು ಅನುಮೋದಿಸುವಂತೆ ಭಾರತೀಯ ವೈಮಾನಿಕ ಪ್ರಾಧಿಕಾರದವರಿಗೆ ಸೂಚನೆಗಳನ್ನು ನೀಡುವಂತೆ ಕೋರಿರುತ್ತಾರೆ.

ನಿವೇಶನದ ಸೂಕ್ತತೆಯನ್ನು ನಿರ್ಧರಿಸಲು ಭಾರತೀಯ ವೈಮಾನಿಕ ಪ್ರಾಧಿಕಾರದ ತನಿಖಾ ತಂಡವನ್ನು ನಿಯೋಜಿಸುವಂತೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗಳು ಭಾರತೀಯ ವೈಮಾನಿಕ ಪ್ರಾಧಿಕಾರದ ಸದಸ್ಯರು (ಯೋಜನೆ) ರವರನ್ನು ದಿನಾಂಕ : 23–05–2003ರ ಅರೆ ಸರ್ಕಾರಿ ಪತ್ರದಲ್ಲಿ ಕೋರಿದೆ.

ಈ) ಭಾರತ ಸರ್ಕಾರದ ಭಾರತೀಯ ವೈಮಾನಿಕ ಪ್ರಾಧಿಕಾರದವರು, 2000 ಮೇ ನಲ್ಲಿ ನಿವೇಶನದ ಸ್ಥಳ ಪರೀಕ್ಷೆ ಮಾಡಿರುತ್ತಾರೆ.

ಉ, ಊ) ವಿಮಾನ ನಿಲ್ದಾಣದ ಕಾಮಗಾರಿಯನ್ನು ಪ್ರಾರಂಭಿಸುವ ಮತ್ತು ಕಾಮಗಾರಿಯನ್ನು ಒಂದು ಕಾಲಮಿತಿಯೊಳಗೆ ಪೂರ್ಣಗೊಳಿಸುವಂತಹ ಹಂತವನ್ನು ಇನ್ನೂ ತಲುಪಿಲ್ಲ.

ಋ) ಈವರೆಗೆ ಯಾವುದೇ ಹಣ ಖರ್ಚು ಮಾಡಿರುವುದಿಲ್ಲ.

4640 (5476) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ):– ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಲ್ಲಿರುವ ಸಣ್ಣ, ಮಧ್ಯಮ ಹಾಗೂ ದೊಡ್ಡ ಕೈಗಾರಿಕೆಗಳು ಎಷ್ಟು; ಅವು ಯಾವುವು; ವಿವರ ನೀಡುವುದು;

ಆ) ರಾಷ್ಟ್ರೀಯ ಹೆದ್ದಾರಿ, ನೀರಾವರಿ ಸೌಲಭ್ಯ, ರೈಲ್ವೆ ಬ್ರಾಡ್‌ಗೇಜ್ ಮೊದಲಾದ ಮೂಲಭೂತ ಸೌಕರ್ಯವನ್ನು ಹೊಂದಿರುವ ಈ ಅವಳಿ ಜಿಲ್ಲೆಗಳಿಗೆ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಇ) ಹಾಗಿದ್ದಲ್ಲಿ ವಿವರ ನೀಡುವುದು; ಸಣ್ಣ ಮಧ್ಯಮ ಹಾಗೂ ದೊಡ್ಡ ಕೈಗಾರಿಕೆಗಳನ್ನು ಯಾವಾಗ ಸ್ಥಾಪಿಸಲಾಗುವುದು;

ಈ) ಇಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳಿಗೆ, ಗೃಹ ಕೈಗಾರಿಕೆಗಳಿಗೆ ಆಲಮಟ್ಟಿ ಜಲಾಶಯದಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಇಲ್ಲಿಯೇ ಸರಬರಾಜು ಮಾಡುವ ಬಗ್ಗೆ ಸರ್ಕಾರದ ನಿಲುವೇನು?